ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 05-01-2016

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ಚುನಾಯಿತರಾದ ನೂತನ ಸದಸ್ಯರ ಪ್ರಮಾಣ ವಚನ ಸ್ವೀಕಾರ ಸಮಾರಂಭ. | **06-01-2016**<br>ಬುಧವಾರ<br>ಬೆಳಿಗ್ಗೆ<br>9.00 ಗಂಟೆಗೆ | ಬ್ಯಾಂಕ್ವೆಟ್ ಹಾಲ್,<br>ವಿಧಾನಸೌಧದ ನೆಲಮಹಡಿ,<br>ಬೆಂಗಳೂರು. |
| 2. | ರಾಷ್ಟ್ರಮಟ್ಟದ ಖಾದಿ ಮತ್ತು ಗ್ರಾಮೋದ್ಯೋಗ ವಸ್ತು ಪ್ರದರ್ಶನ :<br><br>ಉದ್ಘಾಟನೆ:<br><br>ಸತೀಶ್ ಎಸ್. ಜಾರಕಿಹೊಳಿ,<br>ಸಣ್ಣ ಕೈಗಾರಿಕಾ ಸಚಿವರು<br><br>ಅಧ್ಯಕ್ಷತೆ:<br><br>ದಿನೇಶ್ ಗುಂಡೂರಾವ್,<br>ಆಹಾರ ಮತ್ತು ನಾಗರೀಕ ಪೂರೈಕೆ ಖಾತೆ ಸಚಿವರು. | **06-01-2016**<br>ಬುಧವಾರ<br>ಸಂಜೆ<br>5.00 ಗಂಟೆಗೆ | ಸ್ವಾತಂತ್ರ್ಯ ಉದ್ಯಾನವನ,<br>ಫ್ರೀಪಲ್ ಫ್ಲಾಜ್, ಗಾಂಧೀನಗರ,<br>ಬೆಂಗಳೂರು – 560 009 |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಸ್ವಾಮಿ ವಿವೇಕಾನಂದರ ಜನ್ಮದಿನ :
## "ರಾಷ್ಟ್ರೀಯ ಯುವ ದಿನಾಚರಣೆ"ಗೆ ರಾಜ್ಯ ಸರ್ಕಾರದ ಆದೇಶ

**ಬೆಂಗಳೂರು, ಜನವರಿ 5, 2016 (ಕರ್ನಾಟಕ ವಾರ್ತೆ)**

ರಾಷ್ಟ್ರ ಕಂಡ ಮಹಾನ್ ದಾರ್ಶನಿಕ, ತತ್ವಶಾಸ್ತ್ರಜ್ಞ, ಚಿಂತಕ, ಶಿಕ್ಷಣ ತಜ್ಞ, ವೀರ ಸನ್ಯಾಸಿ ಸ್ವಾಮಿ ವಿವೇಕನಾನಂದರ (12-01-1863) ಜನ್ಮದಿನವಾದ ಜನವರಿ 12 ನ್ನು ಭಾರತೀಯ ಯುವ ಜನಾಂಗಕ್ಕೆ ಸ್ವಾಮಿ ವಿವೇಕಾನಂದರ ಆದರ್ಶ ಹಾಗೂ ವಿಚಾರಧಾರೆಗಳು ಸ್ಫೂರ್ತಿದಾಯಕವಾಗಲಿ ಎಂಬ ಸದಾಶಯದಿಂದ 1984 ರಿಂದ ದೇಶದಾದ್ಯಂತ "ರಾಷ್ಟ್ರೀಯ ಯುವ ದಿನಾಚರಣೆಯ ಸಪ್ತಾಹ"ವನ್ನಾಗಿ ಆಚರಿಸಲಾಗುತ್ತಿದೆ. ಸಾಮಾಜಿಕ ಹಾಗೂ ಆಧ್ಯಾತ್ಮಿಕ ಸಾಧಕರು ಆಗಿರುವ ಸ್ವಾಮಿ ವಿವೇಕಾನಂದರು ಯುವ ಜನಾಂಗಕ್ಕೆ ನೀಡಿರುವ ಸಂದೇಶಗಳು ಅಂದಿಗೂ ಇಂದಿಗೂ ಎಂದೆಂದಿಗೂ ಸ್ವೀಕಾರಾರ್ಹವಾಗಿರುತ್ತವೆ.

ರಾಷ್ಟ್ರೀಯತೆ, ದೇಶಭಕ್ತಿ ಹಾಗೂ ಭಾರತೀಯರ ಜೀವನದಲ್ಲಿ ಅದರಲ್ಲೂ ವಿಶೇಷವಾಗಿ ಸ್ವಾಮಿ ವಿವೇಕಾನಂದರ ಗುರಿಯಾಗಿದ್ದ ಯುವ ಜನಾಂಗದಲ್ಲಿ ದೇಶಕಟ್ಟುವ, ದೇಶದ ಭವಿಷ್ಯವನ್ನು ಉಜ್ವಲವಾಗಿ ರೂಪಿಸುವ ಒಡೆದ ಮನಸ್ಸುಗಳಿಗೆ ಭಾವೈಕ್ಯದ ಬೆಸುಗೆ ಹಾಕುವ ಅದ್ಭುತ ಸಾಮರ್ಥ್ಯ ಇರುವ ಯುವಶಕ್ತಿಗೆ ಈ ದೇಶದ ಭವ್ಯ ಇತಿಹಾಸ, ಪರಂಪರೆ ಸಂಸ್ಕೃತಿಗಳ ವಿಚಾರದಲ್ಲಿ ಹೆಮ್ಮೆಪಡುತ್ತಲೇ ವಿದ್ಯಾರ್ಥಿಗಳು ತಮ್ಮ ವರ್ತಮಾನದ ಕರ್ತವ್ಯದ ಬಗ್ಗೆ ಆಲೋಚನೆ ಮಾಡುವಂತೆ ಹಾಗೂ ಕಾರ್ಯಪ್ರವೃತ್ತರಾಗುವಂತೆ ಸ್ವಾಮಿ ವಿವೇಕಾನಂದರು ಬೋಧಿಸಿರುವ ಮೌಲ್ಯಗಳನ್ನು ರಾಜ್ಯಾದ್ಯಂತ ಸಾರ್ವಜನಿಕರು, ಕಾಲೇಜು ವಿದ್ಯಾರ್ಥಿಗಳು ಮತ್ತು ಯುವಜನತೆಗೆ ಸ್ಫೂರ್ತಿಯ ಸಂದೇಶವನ್ನು ನೀಡುವ ನಿಟ್ಟಿನಲ್ಲಿ ರಾಷ್ಟ್ರೀಯ ಯುವ ದಿನಾಚರಣೆ ಅಂಗವಾಗಿ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪದವಿ ಕಾಲೇಜುಗಳಲ್ಲಿ ದಿನಾಂಕ 12-1-2016 ರಿಂದ 19-01-2016 ರವರೆಗೆ "ರಾಷ್ಟ್ರೀಯ ಯುವ ದಿನಾಚರಣೆಯ ಸಪ್ತಾಹ" ವನ್ನು ಆಚರಿಸಲು ಹಾಗೂ ಈ ಸಪ್ತಾಹ ಕಾರ್ಯಕ್ರಮದಲ್ಲಿ ವಿವೇಕಾನಂದರ ತತ್ವ, ಆದರ್ಶ ಹಾಗೂ ಧ್ಯೇಯಗಳನ್ನು ಯುವಜನಾಂಗಕ್ಕೆ ಪರಿಚಯಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಯುವ ಸಪ್ತಾಹ ಕಾರ್ಯಕ್ರಮದ ಮಾರ್ಗಸೂಚಿಗಳ ಅನುಸಾರ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ.

ಅದರಂತೆ, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು, ಕಾಲೇಜು ಶಿಕ್ಷಣ/ತಾಂತ್ರಿಕ ಶಿಕ್ಷಣ ಇಲಾಖೆಯ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಖಾಸಗಿ ಅನುದಾನರಹಿತ ಪದವಿ ಕಾಲೇಜುಗಳು/ಇಂಜಿನಿಯರಿಂಗ್ ಕಾಲೇಜುಗಳು/ಪಾಲಿಟೆಕ್ನಿಕ್ ಕಾಲೇಜುಗಳು ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯನ್ನು ಆಚರಿಸಲು ರಾಜ್ಯ ಸರ್ಕಾರ ಆದೇಶಿಸಿದೆ.

ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ ಅಂಗವಾಗಿ ದಿನಾಂಕ: 12-1-2016 ರಿಂದ 19-01-2016 ರವರೆಗೆ ಹಮ್ಮಿಕೊಳ್ಳಲಾಗಿರುವ "ರಾಷ್ಟ್ರೀಯ ಯುವ ದಿನಾಚರಣೆಯ ಸಪ್ತಾಹ" ದ ಪ್ರಯುಕ್ತ ಆಯಾ ದಿನಾಂಕದ ಕಾರ್ಯಕ್ರಮಗಳನ್ನು ಸ್ಥಾನಿಕವಾಗಿ ಲಭ್ಯವಾಗಬಹುದಾದ ಶ್ರೀ ರಾಮಕೃಷ್ಣ ಮಿಷನ್/ಮಠ ಹಾಗೂ ಸ್ವಾಮಿ ವಿವೇಕಾನಂದರವರ ಆಶ್ರಮಗಳು ಮತ್ತು ಇತರೆ ಸರ್ಕಾರೇತರ ಸಂಘ ಸಂಸ್ಥೆ/ಕ್ರಿಯಾಶೀಲ ಯುವ ಸಂಘಗಳನ್ನು ಸಹ ತೊಡಗಿಸಿಕೊಂಡು ಕಾರ್ಯನಿರ್ವಹಿಸಬೇಕಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಬಾಬು:ಪಿಎಸ್ಐ:ಜಿಪಿಆರ್.

# ಹಲವು ಪ್ರಥಮಗಳ ಬೆಂಗಳೂರು
# ಅಂತರರಾಷ್ಟ್ರೀಯ ಚಲನಚಿತ್ರೋತ್ಸವ – 2016

ಬೆಂಗಳೂರು, ಜನವರಿ 5, (ಕರ್ನಾಟಕ ವಾರ್ತೆ)

ರಾಜ್ಯ ಸರ್ಕಾರವು ಕರ್ನಾಟಕ ಚಲನಚಿತ್ರ ಅಕಾಡೆಮಿ ಮತ್ತು ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಶ್ರಯದಲ್ಲಿ ಜನವರಿ 28 ರಿಂದ ಫೆಬ್ರವರಿ 4 ರವರೆಗೆ ಬೆಂಗಳೂರು ಹಾಗೂ ಮೈಸೂರಿನಲ್ಲಿ ನಡೆಸಲಿರುವ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ – 2016 ಹಲವು ಪ್ರಥಮಗಳನ್ನು ಒಳಗೊಂಡಿದೆ.

- ಪ್ರಪ್ರಥಮ ಬಾರಿಗೆ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸಂಘಟನಾ ಸಮಿತಿಯ ಗೌರವಾಧ್ಯಕ್ಷರಾಗಿರುತ್ತಾರೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಚಿವರು ಕಾರ್ಯಾಧ್ಯಕ್ಷರಾಗಿರುತ್ತಾರೆ. ಖ್ಯಾತ ಚಿತ್ರನಟಿ ಹಾಗೂ ವಿಧಾನ ಪರಿಷತ್ ಸದಸ್ಯೆ ಶ್ರೀಮತಿ ಜಯಮಾಲಾ ಅವರು ಕಲಾ ನಿರ್ದೇಶಕರಾಗಿದ್ದಾರೆ.
- ಏಕಕಾಲದಲ್ಲಿ ಬೆಂಗಳೂರು ಹಾಗೂ ಮೈಸೂರು ಎರಡು ನಗರಗಳಲ್ಲಿ ಚಲನಚಿತ್ರೋತ್ಸವ ನಡೆಯಲಿದೆ.
- ಈ ಬಾರಿಯ ಬೆಂಗಳೂರು ಚಲನ ಚಿತ್ರೋತ್ಸವವು ಒಂದೇ ಸೂರಿನಡಿ ಎರಡು ನಗರಗಳಲ್ಲಿ ನಡೆಯುತ್ತಿದೆ. ಬೆಂಗಳೂರಿನಲ್ಲಿ ರಾಜಾಜಿನಗರದ ಓರಿಯನ್ ಮಾಲ್‌ನ 11 ಬೆಳ್ಳಿ ಪರದೆಗಳ ಮೇಲೆ ಚಿತ್ರೋತ್ಸವದ ಚಿತ್ರಗಳು ಮೂಡಿಬರಲಿದೆ. ಹಾಗೆಯೇ ಮೈಸೂರಿನ ಐನಾಕ್ಸ್ ಚಲನಚಿತ್ರಮಂದಿರದ 4 ಬೆಳ್ಳಿ ಪರದೆಗಳಲ್ಲಿ ಚಲನಚಿತ್ರ ಪ್ರದರ್ಶಿತಗೊಳ್ಳಲಿದೆ.
- ಜನವರಿ 28 ರಂದು ಸಂಜೆ 5–00 ಗಂಟೆಗೆ ವಿಧಾನಸೌಧದ ಮುಂಭಾಗದ (ಉಚ್ಚ ನ್ಯಾಯಾಲಯದ ಎದುರು ಭಾಗ) ಬೆಂಗಳೂರು ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವ – 2016 ಉದ್ಘಾಟನೆಗೊಳ್ಳಲಿದೆ.
- ಚಲನಚಿತ್ರೋತ್ಸವ ಸಮಾರೋಪ ಸಮಾರಂಭವು ಫೆಬ್ರವರಿ 4 ರಂದು ಮೈಸೂರಿನಲ್ಲಿ ನಡೆಯಲಿದೆ.
- ಈ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ದೇಶ–ವಿದೇಶಗಳಿಂದ ಚಲನಚಿತ್ರರಂಗದ 50 ಕ್ಕೂ ಗಣ್ಯ ಪ್ರತಿನಿಧಿಗಳು, ಚಲನಚಿತ್ರ ನಿರ್ದೇಶಕರು, ತಂತ್ರಜ್ಞರು ಪಾಲ್ಗೊಳ್ಳುವರು.
- 61 ದೇಶಗಳ 170 ಚಿತ್ರಗಳು 7 ದಿನಗಳ ಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳಲಿದೆ.
- ಸ್ಪರ್ಧಾತ್ಮಕ ವಿಭಾಗವನ್ನು 3 ಭಾಗವಾಗಿ ವಿಂಗಡಿಸಲಾಗಿದೆ. 1. ಏಷಿಯನ್ ಸ್ಪರ್ಧೆ 2. ಭಾರತೀಯ ಚಿತ್ರಗಳು 3. ಕನ್ನಡ ಚಿತ್ರಗಳು.
- ಚಿತ್ರೋತ್ಸವದ ಸ್ಪರ್ಧೆಯಲ್ಲಿ ಏಷಿಯಾ ವಿಭಾಗದಿಂದ 12 ಚಿತ್ರಗಳು, ಭಾರತೀಯ ವಿಭಾಗದಲ್ಲಿ 13, ಕನ್ನಡದಲ್ಲಿ 15 ಚಿತ್ರಗಳು ಪಾಲ್ಗೊಳ್ಳಲಿದೆ.
- ಈ ಬಾರಿ ಕನ್ನಡ ಚಿತ್ರಗಳ ಸ್ಪರ್ಧೆಯ ವಿಜೇತರನ್ನು ಅಂತರರಾಷ್ಟ್ರೀಯ ಖ್ಯಾತಿಯ ತೀರ್ಪುಗಾರರು ನಿರ್ಧರಿಸಲಿದ್ದಾರೆ.
- ಹಲವು ವೈಶಿಷ್ಟ್ಯಗಳನ್ನು ಚಿತ್ರ ಪ್ರದರ್ಶನದಲ್ಲಿ ಅಳವಡಿಸಲಾಗಿದೆ. ಅವುಗಳೆಂದರೆ.
  1. ಸಮಕಾಲೀನ ಜಾಗತಿಕ ಚಿತ್ರಗಳ ಪ್ರದರ್ಶನ.
  2. ಮೆಕ್ಸಿಕೋ, ಇರಾನ್, ಟರ್ಕಿ ದೇಶಗಳ ಚಿತ್ರಗಳ ವಿಶೇಷ ಆವಲೋಕನ

3. ಅಂತರರಾಷ್ಟ್ರೀಯ ಖ್ಯಾತಿಯ ನಿರ್ದೇಶಕರಾದ ಹಂಗೇರಿಯ ಇಸ್ಟ್ವಾನ್ ಝೊಬೋ ಹಾಗೂ ಡೆನ್‍ಮಾರ್ಕ್‍ನ ನಿಲ್ಸ್ ಮ್ಯಾಲ್ಮರೋಸ್ ಅವರ ಚಿತ್ರಗಳ ಪ್ರದರ್ಶನಕ್ಕೆ ಒತ್ತು.
4. ಕಲಾವಿದರ ಸಿಂಹಾವಲೋಕನ ವಿಭಾಗದಲ್ಲಿ ಪಂಚಭಾಷಾ ತಾರೆ, ಪದ್ಮಭೂಷಣ ಶ್ರೀಮತಿ ಬಿ. ಸರೋಜಾ ದೇವಿ ಅವರ ಚಿತ್ರಗಳ ಪ್ರದರ್ಶನ.
5. ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತರ ಚಿತ್ರ ಪ್ರದರ್ಶನದಲ್ಲಿ ಮೃಣಾಲ್ ಸೇನ್ ಹಾಗೂ ಅಡೂರ್ ಗೋಪಾಲ್ ಕೃಷ್ಣ ಅವರ ಚಿತ್ರಗಳ ಪ್ರದರ್ಶನ.
6. ಕನ್ನಡದ ಖ್ಯಾತ ಚಿತ್ರ ನಿರ್ದೇಶಕರಾದ ಶ್ರೀ ಸಿದ್ದಲಿಂಗಯ್ಯ ಹಾಗೂ ಶ್ರೀ ಕೆ.ಎಸ್.ಎಲ್. ಸ್ವಾಮಿ (ರವೀ) ಅವರಿಗೆ ನಮನ ಸಲ್ಲಿಸಲು ಅವರ ಚಿತ್ರಗಳ ಪ್ರದರ್ಶನ.
7. ಮೊದಲ ಬಾರಿಗೆ ಸಾಕ್ಷ್ಯಚಿತ್ರಗಳ ಪ್ರದರ್ಶನ. ಬರ ಕುರಿತಂತೆ ದೇಶ ವಿದೇಶಗಳಲ್ಲಿ ಸಿದ್ಧಗೊಂಡಿರುವ ಸಾಕ್ಷ್ಯಚಿತ್ರಗಳ ಪ್ರದರ್ಶನಕ್ಕೆ ಆದ್ಯತೆ.

- ಬರ್ಲಿನ್, ಕಾನ್ಸ್, ಟೊರೆಂಟೋ, ಗೋವಾ, ಮುಂಬೈ ಹಾಗೂ ಕೇರಳಾ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡ ಅತ್ಯುತ್ತಮ ಏಷಿಯನ್ ಮತ್ತು ಜಾಗತಿಕ ಸಿನಿಮಾಗಳನ್ನು ಪ್ರದರ್ಶನಕ್ಕೆ ಆಯ್ಕೆ ಮಾಡಲಾಗಿದೆ.
- ಅಂತರರಾಷ್ಟ್ರೀಯ ಖ್ಯಾತಿಯ ನಿರ್ದೇಶಕರಾದ ಇರಾನ್‍ನ ಜಾಫರ್ ಪಹಾನಿ, ಚೀನಾದ ಜಿಯಾ ಝಾಂಗ್ ಕೆ, ಜಪಾನ್‍ನ ಹೋ ಸಿಯಾವೋ ಸಿಯೆನ್, ಟರ್ಕಿಯ ಯಮಿನ್ ಅಲ್ಫರ್, ಫಾನ್ಸ್‍ನ ಜಾಕ್ಸ್ ಅಡಿಯಾರ್ಸ್, ಜರ್ಮನಿಯ ಕ್ರಿಶ್ಚಿಯನ್ ಪೆಥೋಲ್ಡ್, ಇಟಲಿಯನ್ ಮೊರೆಟ್ಟಿ, ಅವರ ಚಿತ್ರಗಳು ಪ್ರದರ್ಶನಗೊಳ್ಳಲಿವೆ.
- ಚಿತ್ರಗಳನ್ನು ವೀಕ್ಷಿಸಲಿಚ್ಛಿಸುವವರಿಗೆ ನೋಂದಣಿಗಾಗಿ, ಬೆಂಗಳೂರಿನ ಚಲನಚಿತ್ರ ಅಕಾಡೆಮಿಯ ಕಾರ್ಯಾಲಯ, ಸುಚಿತ್ರ ಫಿಲಂ ಸೊಸೈಟಿ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಮೈಸೂರಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ನೋಂದಣಿ ಘಟಕಗಳನ್ನು ಜನವರಿ 6 ರಿಂದ ತೆರೆಯಲಾಗುವುದು.
- ಕನ್ನಡ, ಸಂಸ್ಕೃತಿ, ವಾರ್ತಾ ಹಾಗು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್.ಎಸ್. ಚನ್ನಪ್ಪಗೌಡ, ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಶ್ರೀ ಎಸ್. ವಿ. ರಾಜೇಂದ್ರಸಿಂಗ್ ಬಾಬು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್.ಆರ್. ವಿಶುಕುಮಾರ್, ಖ್ಯಾತ ನಿರ್ದೇಶಕರಾದ ಡಾ. ಗಿರೀಶ್ ಕಾಸರವಳ್ಳಿ, ಟಿ.ಎಸ್. ನಾಗಾಭರಣ, ಆರ್.ಪಿ.ಶರ್ಮಾ, ನಟಿ ರಾಧಿಕಾ ಪಂಡಿತ್, ಪತ್ರಕರ್ತ ವಿಶಾಖ ಎನ್., ಸೆನ್ಸಾರ್ ಮಂಡಳಿಯ ಸ್ಥಳೀಯ ಮುಖ್ಯಸ್ಥರು, ಫಿಲ್ಮಂ ಸೊಸೈಟಿ ಅಧ್ಯಕ್ಷರು, ಚಿಲ್ಡ್ರನ್ಸ್ ಇಂಡಿಯಾದ ಅಧ್ಯಕ್ಷ ನಂಜುಂಡೇಗೌಡ, ಸಂಘಟನಾ ಸಮಿತಿಯ ಸದಸ್ಯರಾಗಿರುತ್ತಾರೆ.
- ಖ್ಯಾತ ಸಿನಿಮಾ ತಜ್ಞ ವಿದ್ಯಾ ಶಂಕರ್ ಕಾರ್ಯಕಾರಿ ಕಲಾ ನಿರ್ದೇಶಕರಾಗಿರುತ್ತಾರೆ.
- ಕೇಂದ್ರ ಸರ್ಕಾರ ಗೋವಾದಲ್ಲಿ ಸಂಘಟಿಸುವ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ನಿರ್ದೇಶಕರಾಗಿದ್ದ ಶ್ರೀ ಶಂಕರ್ ಮೋಹನ್ ಅವರು ಸಲಹೆಗಾರರಾಗಿರುತ್ತಾರೆ.

ಬಾಬು:ಪಿಎಸ್‍ಐ:ಜೆಪಿಆರ್.

# ಸಿನಿಮೋತ್ಸವದಲ್ಲಿ 15 ಕನ್ನಡ ಚಿತ್ರಗಳು ಸ್ಪರ್ಧೆಗೆ ಆಯ್ಕೆ

**ಬೆಂಗಳೂರು, ಜನವರಿ 5, 2016 (ಕರ್ನಾಟಕ ವಾರ್ತೆ)**

ಈ ಬಾರಿಯ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ತುಳು ಚಿತ್ರವೊಂದು ಸೇರಿದಂತೆ ಒಟ್ಟು 15 ಕನ್ನಡ ಚಿತ್ರಗಳು ಸ್ಪರ್ಧೆಗೆ ಆಯ್ಕೆಯಾಗಿದ್ದು, ಕನ್ನಡ ಚಿತ್ರಗಳ ಸ್ಪರ್ಧೆಯ ವಿಜೇತರನ್ನು ಅಂತರರಾಷ್ಟ್ರೀಯ ಖ್ಯಾತಿಯ ತೀರ್ಪುಗಾರರು ನಿರ್ಧರಿಸಲಿದ್ದಾರೆ.

ಸ್ಪರ್ಧೆಗೆ ಬಂದಿದ್ದ 36 ಕನ್ನಡ ಚಿತ್ರಗಳಲ್ಲಿ 15 ಚಿತ್ರಗಳು ಅಂತಿಮವಾಗಿ ಸ್ಪರ್ಧೆಗೆ ಆಯ್ಕೆಯಾಗಿದ್ದು, ಅವುಗಳು ಈ ಕೆಳಕಂಡತಿದೆ:

ಸ್ಪರ್ಧೆಗೆ ಆಯ್ಕೆಯಾಗಿರುವ ಕನ್ನಡ ಚಿತ್ರಗಳೆಂದರೆ ವಿ. ಚಲ ಅವರ ನಿರ್ದೇಶನದ "ಬಿರುಕು" ಮೋಹನ್‌ಕುಮಾರ್ ಕೆ.ಎನ್. ನಿರ್ದೇಶನದ "ಬೊಂಬೆಯಾಟ" ವೀರೇಂದ್ರಶೆಟ್ಟಿ ಕವೂರ್ ಅವರ "ಚಾಲಿ ಪೋಲಿಲು" (ತುಳು) ನಾಗನಾಥ ಮಾಧವ್ ರಾವ್ ಜೋಶಿಯ "ಚಿಗುರು" ಎಸ್. ನಾರಾಯಣ್ ಅವರ "ದಕ್ಷ" ಬಿ. ಸುರೇಶ್ ಅವರ "ದೇವರ ನಾಡಲ್ಲಿ" ಬಿ.ಎಮ್. ಗಿರಿಜ ಅವರ "ಮೈತ್ರಿ" ಬಿ.ಎಸ್. ಲಿಂಗದೇವರು ಅವರ "ನಾನು ಅವನಲ್ಲ ಅವಳು" ವೆಂಕಟ್ ಭಾರದ್ವಾಜ್ ಅವರ "ನಗರದಲ್ಲಿ ಒಂದು ದಿನ" ದಿನೇಶ್‌ಬಾಬು ಅವರ "ಪ್ರಿಯಾಂಕ" ಸುನಿಲ್ ರಾಘವೇಂದ್ರ ಅವರ "ಪುಟ ತಿರುಗಿಸಿ ನೋಡು" ಅನೂಪ್ ಭಂಡಾರಿ ಅವರ "ರಂಗಿತರಂಗ" ಉಮಾಶಂಕರ್ ಸ್ವಾಮಿ ಅವರ "ಸಾಲದ ಮಗು" ಹಾಗು ಪಿ. ಶೇಷಾದ್ರಿ ನಿರ್ದೇಶನದ "ವಿಧಾಯ".

ಬಾಬು:ಪೂರ್ಣಿಮ:ಜಿಪಿಆರ್.

# ಕನ್ನಡದ "ತಿಥಿ" ಸಿನಿಮಾ ಪ್ರದರ್ಶನ ಮೂಲಕ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಚಾಲನೆ

**ಬೆಂಗಳೂರು, ಜನವರಿ 5, (ಕರ್ನಾಟಕ ವಾರ್ತೆ)**

ಈ ಬಾರಿಯ 8ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದ ಚಲನಚಿತ್ರ ಮೊದಲ ಸಿನಿಮಾವಾಗಿ ಕನ್ನಡದ "ತಿಥಿ" ಚಿತ್ರವನ್ನು ಪ್ರದರ್ಶಿಸುವ ಮೂಲಕ ಸಿನಿಮೋತ್ಸವಕ್ಕೆ ಚಾಲನೆ ನೀಡಲಾಗುವುದೆಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಚಿವ ಆರ್. ರೋಷನ್ ಬೇಗ್ ಅವರು ತಿಳಿಸಿದರು.

ಇಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಚಲನಚಿತ್ರೋತ್ಸವದ ಸಿದ್ಧತೆಗಳ ಬಗ್ಗೆ ಮಾಧ್ಯಮದವರಿಗೆ ವಿವರ ನೀಡಲು ಕರೆಯಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಚಿವರು ಇದುವರೆವಿಗೂ ವಿದೇಶಿ ಚಿತ್ರಗಳನ್ನು ಮೊದಲ ಸಿನಿಮಾವಾಗಿ ಪ್ರದರ್ಶಿಸಲಾಗುತಿತ್ತು. ಆದರೆ ಇದೇ ಮೊದಲ ಬಾರಿಗೆ ಕನ್ನಡ ಚಿತ್ರವನ್ನು ಆರಂಭಿಕ ಸಿನಿಮಾವಾಗಿ ಪ್ರದರ್ಶಿಸಲಾಗುತ್ತಿದೆ ಎಂದರು.

ಇದೇ ಮೊದಲ ಬಾರಿಗೆ ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವವನ್ನು ಬೆಂಗಳೂರು ಹಾಗೂ ಮೈಸೂರಿನಲ್ಲಿ ಏಕಕಾಲಕ್ಕೆ ಆಯೋಜಿಸುತ್ತಿರುವ ಜೊತೆಗೆ ಒಂದೇ ಸೂರಿನಡಿ ಚಲನಚಿತ್ರವನ್ನು

ಪ್ರದರ್ಶಿಸಲಾಗುತ್ತಿದ್ದು, ಬೆಂಗಳೂರಿನ ಓರಿಯನ್ ಮಾಲ್‌ನ 11 ಬೆಳ್ಳಿ ಪರದೆ ಹಾಗೂ ಮೈಸೂರು ಮಾಲ್‌ನ ಐನಾಕ್ಸ್ ಚಿತ್ರಮಂದಿರದ 4 ಬೆಳ್ಳಿ ಪರದೆಗಳನ್ನು ಚಿತ್ರ ಪ್ರದರ್ಶನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಎಸ್.ವಿ. ರಾಜೇಂದ್ರ ಸಿಂಗ್ ಅವರು ಮಾತನಾಡಿ ಈ 8 ನೇ ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವದಲ್ಲಿ 61 ದೇಶಗಳಿಂದ ಒಟ್ಟು 170 ಚಿತ್ರಗಳು, ಪ್ರದರ್ಶನಗೊಳ್ಳುತ್ತಿದ್ದು 50 ಕ್ಕೂ ಹೆಚ್ಚು ದೇಶವಿದೇಶದ ಚಲನಚಿತ್ರರಂಗದ ಗಣ್ಯರು ಭಾಗವಹಿಸಲಿದ್ದಾರೆ. ಚಿತ್ರೋತ್ಸವದ ಸ್ಪರ್ಧೆಗೆ ಏಷಿಯಾ ವಿಭಾಗದ 200 ಸಿನಿಮಾಗಳಿಂದ 12 ಸಿನಿಮಾಗಳ ಭಾರತೀಯ ವಿಭಾಗದಲ್ಲಿ 65 ಸಿನಿಮಾಗಳಿಂದ 13 ಹಾಗೂ ಕನ್ನಡದಲ್ಲಿ 36 ಸಿನಿಮಾಗಳಿಂದ 15 ಸಿನಿಮಾಗಳನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಜನವರಿ 28 ರಿಂದ ಫೆಬ್ರವರಿ 4 ರವರೆಗೆ ನಡೆಯಲಿರುವ 8ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನೆಯನ್ನು ಜನವರಿ 28 ರಂದು ವಿಧಾನಸೌಧದ ಮುಂಭಾಗದಲ್ಲಿ ಹಾಗೂ ಸಮಾರೋಪವನ್ನು ಮೈಸೂರಿನ ಅರಮನೆ ಮುಂಭಾಗದಲ್ಲಿ ನಡೆಸಲು ತೀರ್ಮಾನಿಸಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿ ಡಾ. ಎನ್.ಎಸ್. ಚನ್ನಪ್ಪಗೌಡ, ನಿರ್ದೇಶಕ ಎನ್. ಆರ್. ವಿಶುಕುಮಾರ್, ಖ್ಯಾತ ನಿರ್ದೇಶಕ ಹಾಗೂ ಸಂಘಟನಾ ಸಮಿತಿ ಸದಸ್ಯರಾದ ಡಾ. ಗಿರೀಶ್ ಕಾಸರವಳ್ಳಿ, ಖ್ಯಾತ ಚಿತ್ರನಟಿ ಹಾಗೂ ವಿಧಾನ ಪರಿಷತ್ ಸದಸ್ಯೆ ಶ್ರೀಮತಿ ಜಯಮಾಲ, ಕಾರ್ಯಕಾರಿ ಕಲಾ ನಿರ್ದೇಶಕ ಹಾಗೂ ಸಿನಿಮಾ ತಜ್ಞ ವಿದ್ಯಾಶಂಕರ್ ಹಾಗೂ ಸಿನಿಮೋತ್ಸವದ ಸಲಹೆಗಾರರಾದ ಶಂಕರ್ ಮೋಹನ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಸಾ.ರಾ. ಗೋವಿಂದು ಅವರು ಉಪಸ್ಥಿತರಿದ್ದರು.

ಬಾಬು:ಪೂರ್ಣಿಮ:ಜಿಪಿಆರ್.

## ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವ ವೈಶಿಷ್ಟ್ಯ

ಬೆಂಗಳೂರು, ಜನವರಿ 5, 2016 (ಕರ್ನಾಟಕ ವಾರ್ತೆ)

8ನೇ ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವವು ಈ ಬಾರಿ ಹಲವು ವೈಶಿಷ್ಟ್ಯದಿಂದ ಕೂಡಿದ್ದು ಅಂತರರಾಷ್ಟ್ರೀಯ ಖ್ಯಾತಿಯ ನಿರ್ದೇಶಕರಾದ ಹಂಗೇರಿಯ ಇಸ್ಟ್ವಾನ್ ಝಬೋ ಹಾಗು ಡೆನ್‌ಮಾರ್ಕ್‌ನ ನಿಲ್ಸ್ ಮ್ಯಾಲ್ಮರೋಸ್ ಅವರ ಚಿತ್ರಗಳ ಪ್ರದರ್ಶನವಿರುತ್ತದೆ.

ಕಲಾವಿದರ ಸಿಂಹಾವಲೋಕನ ವಿಭಾಗದಲ್ಲಿ ಪಂಚಭಾಷಾ ತಾರೆ ಪದ್ಮಭೂಷಣ ಬಿ. ಸರೋಜಾದೇವಿ ಅವರ ಚಲನಚಿತ್ರಗಳು, ಖ್ಯಾತ ಚಿತ್ರ ನಿರ್ದೇಶಕರಾದ ಸಿದ್ದಲಿಂಗಯ್ಯ ಹಾಗು ಕೆ.ಎಸ್.ಎಲ್. ಸ್ವಾಮಿ ಅವರ ಚಿತ್ರಗಳು, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತರ ಚಿತ್ರ ಪ್ರದರ್ಶನದಲ್ಲಿ ಮೃಣಾಲ್ ಸೇನ್ ಹಾಗೂ ಅಡೂರ್ ಗೋಪಾಲಕೃಷ್ಣ ಅವರ ಚಿತ್ರಗಳು ಸೇರಿದಂತೆ ಬರ್ಲಿನ್, ಕಾನ್ಸ್, ಟೊರೆಂಟೋ, ಗೋವಾ, ಮುಂಬೈ ಮತ್ತು ಕೇರಳ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡ ಅತ್ಯುತ್ತಮ ಏಷ್ಯನ್ ಮತ್ತು ಜಾಗತಿಕ ಸಿನಿಮಾಗಳನ್ನು ಪ್ರದರ್ಶಿಸಲಾಗುತ್ತಿದೆ.

ಇದೇ ಮೊದಲ ಬಾರಿಗೆ ಚಿತ್ರೋತ್ಸವದಲ್ಲಿ 25 ಗಂಟೆ ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸಲಾಗುವುದಲ್ಲದೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಶೈಕ್ಷಣಿಕ ಕಾರ್ಯಕ್ರಮಗಳಡಿ ಚಲನ ಚಿತ್ರರಂಗಕ್ಕೆ ಸಂಬಂಧಿಸಿದಂತೆ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿದೆ.

ಈ ಚಲನಚಿತ್ರೋತ್ಸವದಲ್ಲಿ ಭಾಗವಹಿಸಲು ಇಚ್ಛಿಸುವ ಬೆಂಗಳೂರಿನ ಪ್ರೇಕ್ಷಕರು, ಕರ್ನಾಟಕ ಚಲನಚಿತ್ರ ಅಕಾಡೆಮಿ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಹಾಗೂ ಸುಚಿತ್ರ ಫಿಲ್ಮಂ ಸೊಸೈಟಿ ಇಲ್ಲಿ ಹಾಗೂ ಮೈಸೂರಿನ ಪ್ರೇಕ್ಷಕರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಸಾರ್ವಜನಿಕರಿಗೆ 600 ರೂ. ಹಾಗೂ ಫಿಲ್ಮ ಕ್ಲಬ್, ಫಿಲ್ಮ ಸೊಸೈಟಿ ಸದಸ್ಯರು, ಹಿರಿಯ ನಾಗರೀಕರು ಮತ್ತು 18 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ 300 ರೂ.ಗಳ ಪ್ರವೇಶ ಶುಲ್ಕವನ್ನು ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ ವಿಳಾಸ www.biffes.in ಅನ್ನು ಸಂಪರ್ಕಿಸಬಹುದು.

ಪೂರ್ಣಿಮ:ಜಿಪಿಆರ್

## ಸಮಾವೇಶ ಮುಂದೂಡಿಕೆ

ಬೆಂಗಳೂರು, ಜನವರಿ 5, 2016 (ಕರ್ನಾಟಕ ವಾರ್ತೆ)

ದಾವಣಗೆರೆಯಲ್ಲಿ ಜನವರಿ 10 ರಂದು ನಡೆಸಲು ಉದ್ದೇಶಿಸಲಾಗಿದ್ದ ರಾಜ್ಯ ಮಟ್ಟದ ಕುರಿಗಾರರ ಜಾಗೃತಿ ಸಮಾವೇಶವನ್ನು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ ಎಂದು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷರು ತಿಳಿಸಿದ್ದಾರೆ.

ಬಾಬು:ಜಿಪಿಆರ್